## ದಿನಾಂಕ: 04.08.2025ರಂದು ನಡೆಯಲಿರುವ ಪ್ರಶಾಸನ ಸಮಿತಿ 76ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ 76ನೆಯ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 04-08-2025 ಗುರುವಾರ ಬೆಳಿಗ್ಗೆ 11.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

### ಸಭೆಯಲ್ಲಿ ಹಾಜರಿದ್ದವರು:

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀ ಪಿ.ಹೆಚ್. ಪೂಜಾರ್, ಮಾನ್ಯ ವಿಧಾನ ಪರಿಷತ್ ಸದಸ್ಯರು, ಎಕ್ಸ್ ಟೆನ್ಸ್ ಏರಿಯಾ, ವಾರ್ಡ್–10, ಮಹಿಳಾ ಕಾಲೇಜು ಹಿಂಭಾಗ, ಬಾಗಲಕೋಟೆ– 587101. – ಸದಸ್ಯರು
3. ಶ್ರೀಮತಿ ಸತ್ಯವತಿ ಎಮ್., ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) – ಸದಸ್ಯರು
4. ಪ್ರೊ. ರಜನೀಶ ಕುಮಾರ ಮಿಶ್ರ, ಸಂಸ್ಕೃತ ಮತ್ತು ಇಂಡಿಕ್ ಅಧ್ಯಯನ ವಿಭಾಗ, ಜವಾಹರಲಾಲ ನೆಹರು ವಿಶ್ವವಿದ್ಯಾಲಯ, ನವದೆಹಲಿ – 110067 – ಸದಸ್ಯರು
5. ಡಾ. ಆರ್. ಶ್ರೀಧರ ಶಾಸ್ತ್ರಿ ಸೂರಿ, ಪ್ರಾಧ್ಯಾಪಕರು(ನಿ), ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಕಾಲೇಜು, ಶ್ರೀ ಸಿದ್ಧಗಂಗಾ ಮಠ, ತುಮಕೂರು – ಸದಸ್ಯರು
6. ಡಾ. ಬಂಗಾರಮ್ಮ, ಕೆ. ನಂ–126, ಶಾಂತಿನಗರ, ನಾಗರತ್ನಮ್ಮ ಬಡಾವಣೆ, ಶಿವಮೊಗ್ಗ. 577201. – ಸದಸ್ಯರು
7. ಡಾ. ಮುನೀರ್ ಅಹಮ್ಮದ್ ನಂ–403, 38ಎ ಕ್ರಾಸ್, 26ನೇ ಮೇನ್, 9ನೇ ಬ್ಲಾಕ್, ಜಯನಗರ, ಬೆಂಗಳೂರು– 560041 – ಸದಸ್ಯರು
8. ಶ್ರೀ ಬಸಪ್ಪ ಡೊಂಕಬಳ್ಳಿ, #302/302 ಶ್ರೀನಿಧಿ ನಿಲಯ, ಬೈರಪ್ಪ ಬಿಲ್ಡಿಂಗ್, 4ನೇ ಅಡ್ಡರಸ್ತೆ, ರಾಮಮಂದಿರ ರಸ್ತೆ, ಕೊಡಿಗೆಹಳ್ಳಿ, ಬೆಂಗಳೂರು– 560092 – ಸದಸ್ಯರು
9. ಶ್ರೀ ಹನುಮಂತನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಕುಂಚಿಟಿಗರ ಮಹಾ ಸಂಸ್ಥಾನ ಮಠ (ರಿ.), ನರಸಿಂಹಗಿರಿ ಕ್ಷೇತ್ರ, ಕೊರಟಗೆರೆ, ತುಮಕೂರು – 572129 – ಸದಸ್ಯರು
10. ಶ್ರೀ ನಾರಾಯಣ ಯಾಜಿ ಬಿನ್ ರಾಮ ಯಾಜಿ, ಕೆ.ಹೆಚ್.ಬಿ ಕಾಲೋನಿ, ಪ್ರಭಾತ ನಗರ, ಹೊನ್ನಾವರ, ಉತ್ತರ ಕನ್ನಡ–581334 – ಸದಸ್ಯರು
11. ಪ್ರೊ. ಸಿ. ಪಾಲಯ್ಯ, ಕುಲಸಚಿವರು(ಪ್ರ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಸದಸ್ಯ ಕಾರ್ಯದರ್ಶಿಗಳು

### ಸಭೆಯಲ್ಲಿ ಹಾಜರಿಲ್ಲದವರು:

1. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ – ಸದಸ್ಯರು
2. ಪ್ರಧಾನ ಕಾರ್ಯದರ್ಶಿಗಳು, ಉನ್ನತಶಿಕ್ಷಣ ಇಲಾಖೆ – ಸದಸ್ಯರು
3. ಶ್ರೀ ಪ್ರದೀಪ್ ಈಶ್ವರ್, ಮಾನ್ಯ ವಿಧಾನಸಭಾ ಸದಸ್ಯರು, ಚಿಕ್ಕಬಳ್ಳಾಪುರ ವಿಧಾನ ಸಭಾ ಕ್ಷೇತ್ರ, ನಂ–516, ಪೆರೇಸಂದ್ರ ಗ್ರಾಮ, ಚಿಕ್ಕಬಳ್ಳಾಪುರ ತಾಲ್ಲೂಕು, ಚಿಕ್ಕಬಳ್ಳಾಪುರ– 562104. – ಸದಸ್ಯರು
4. ಆಯುಕ್ತರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ – ಸದಸ್ಯರು
5. ಶ್ರೀಮತಿ ಸಮತಾ ಹೊಸಪೇಟೆ, "ಬಾಲಾಜಿ", ಕುವೆಂಪು ನಗರ ಬಸ್ ನಿಲ್ದಾಣದ ಎದುರುಗಡೆ, ಹನುಮಾನ್ ನಗರ, ಬೆಳಗಾವಿ – 19 – ಸದಸ್ಯರು

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ.ಸಂ. | ವಿಷಯ ಮತ್ತು ಟಿಪ್ಪಣಿ |
|---|---|
| **ವಿಷಯ 01** | **ಪ್ರಶಾಸನ ಸಮಿತಿ 75ನೇ ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ಪ್ರಶಾಸನ ಸಮಿತಿ 75ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 03.04.2025ರಂದು ನಡೆಯಿತು. ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಮುಂದುವರಿದು, ಸಮಿತಿಯ ನಿರ್ಣಯಗಳನ್ನು ಕಾರ್ಯಗತಗೊಳಿಸಿ ಅನುಪಾಲನಾ ವರದಿಯನ್ನು ಆದಷ್ಟು ಬೇಗನೆ ಸದಸ್ಯರಿಗೆ ರವಾನಿಸಲು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.** |
| **ವಿಷಯ 02** | **ಪ್ರಶಾಸನ ಸಮಿತಿ ತುರ್ತು ಸಭೆಯ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ಪ್ರಶಾಸನ ಸಮಿತಿ ತುರ್ತು ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 16.07.2025ರಂದು ನಡೆಯಿತು. ಸಭೆಯ ನಿರ್ಣಯದ ಅನುಪಾಲನಾ ವರದಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಮುಂದುವರಿದು, ಸಮಿತಿಯ ನಿರ್ಣಯಗಳನ್ನು ಕಾರ್ಯಗತಗೊಳಿಸಿ ಅನುಪಾಲನಾ ವರದಿಯನ್ನು ಆದಷ್ಟು ಬೇಗನೆ ಸದಸ್ಯರಿಗೆ ರವಾನಿಸಲು ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಲಾಯಿತು.** |
| **ವಿಷಯ 03** | **ಹಣಕಾಸು ಸಮಿತಿ 50ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ದಿನಾಂಕ: 28.07.2025ರಂದು ನಡೆದ ಹಣಕಾಸು ಸಮಿತಿ 50ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು** |
| **ವಿಷಯ 04** | **2024–25ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಹಣಕಾಸಿನ ವಹಿವಾಟನ್ನು Tally ತಂತ್ರಾಂಶದಲ್ಲಿ ನಮೂದಿಸಲಾಗುತ್ತಿದೆ. ಹಣಕಾಸಿನ ವ್ಯವಹಾರಗಳನ್ನು M/S. D.N Joshi & Co. ರವರು ನಿರ್ವಹಿಸುತ್ತಿದ್ದಾರೆ. ಸದರಿಯವರು 2024–25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು (Balance Sheet, Receipts & Payment and Income & Expenditure) ಸಿದ್ದಪಡಿಸಿ, ಸಲ್ಲಿಸಿರುವ ಲೆಕ್ಕಪತ್ರಗಳನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು** |
| **ವಿಷಯ 05** | **ಪ್ರಶಿಕ್ಷಣ ಪರಿಷತ್ತಿನ 43ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ದಿನಾಂಕ: 26.05.2025ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 43ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು** |
| **ವಿಷಯ 06** | **ಪ್ರಶಿಕ್ಷಣ ಪರಿಷತ್ತಿನ 44ನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.** |
| **ಟಿಪ್ಪಣಿ** | ದಿನಾಂಕ: 29.07.2025ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ 44ನೇ ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು** |

| | |
|---|---|
| ವಿಷಯ 07 | **ಪ್ರಸಾರಾಂಗ 'ಪರಿಶೀಲನಾ ಸಮಿತಿ' ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ.** |
| ಟಿಪ್ಪಣಿ | ದಿನಾಂಕ: 30.05.2025ರಂದು ನಡೆದ ಪ್ರಸಾರಾಂಗ 'ಪರಿಶೀಲನಾ ಸಮಿತಿ' ಸಭೆಯ ನಡಾವಳಿಯನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು** |
| ವಿಷಯ 08 | **FDP ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಅನುಮತಿ ನೀಡುವ ಕುರಿತು.** |
| ಟಿಪ್ಪಣಿ | ಆಂತರಿಕ ಗುಣಮಟ್ಟ ಭರವಸೆ ಕೋಶ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು– ಇದರ ವತಿಯಿಂದ ವಿಶ್ವವಿದ್ಯಾಲಯದ ಎಲ್ಲಾ ಶೈಕ್ಷಣಿಕ ವಿಭಾಗದ ಸಿಬ್ಬಂದಿಗಳಿಗೆ 08 ದಿನಗಳ ಆನ್ಲೈನ್ ಮೂಲಕ FDP ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸಭೆಯ ಅನುಮತಿ ಕೋರಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮತಿಸಿತು.** |
| ವಿಷಯ 09 | **Samskrit Evening College Statute governing Under–Graduate, Post–Graduate, Diploma P.G. Diploma and other certificate Programmes in Karnataka Samskrit University, 2025 (in Chamarajpet Campus of Karnataka Samskrit University) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕ್ಯಾಂಪಸ್‌ನ ಸಂಜೆ ಕಾಲೇಜಿನ ಪರಿನಿಯಮವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ರಾಜ್ಯ ಸರ್ಕಾರವು 2010 ರಲ್ಲಿ ಕರ್ನಾಟಕ ರಾಜ್ಯ ಶಾಸಕಾಂಗದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಾಯ್ದೆ 2009 ಅನ್ನು ಅಂಗೀಕರಿಸುವ ಮೂಲಕ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ ಯುಜಿಸಿ ಕಾಯ್ದೆ, 12B ಮತ್ತು 2F ಸ್ಥಾನವನ್ನು ಪಡೆದಿದೆ ಹಾಗೂ NAAC 'A' ಶ್ರೇಣಿಯಿಂದ ಪ್ರತ್ಯಾಯಿತವಾಗಿದೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸಂಜೆ ಕಾಲೇಜನ್ನು ಆರಂಭಿಸುವಂತೆ ಸಂಸ್ಕೃತಾಭಿಮಾನಿಗಳಿಂದ ಹಾಗೂ ಸಾರ್ವಜನಿಕರಿಂದ ಬೇಡಿಕೆಗಳು ಬಂದಿದ್ದರಿಂದ ಸಂಜೆ ಕಾಲೇಜನ್ನು ಸ್ಥಾಪಿಸಲಾಯಿತು. ಸಂಜೆ ಕಾಲೇಜಿನ ಸ್ಥಾಪನೆಗೆ ಸಂಬಂಧಿಸಿದ "Statute governing the Samskrit Evening College" ಪರಿನಿಯಮವನ್ನು ರಚಿಸಲಾಗಿದ್ದು, ಈ ಪರಿನಿಯಮವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಹಾಗೂ ಸರ್ಕಾರದ ಅನುಮೋದನೆಗೆ ಸಲ್ಲಿಸಲು ನಿರ್ಣಯಿಸಿತು.** |
| ವಿಷಯ 10 | **ಶ್ರೀ ಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ, ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆ – ಈ ಕಾಲೇಜಿಗೆ ಜ್ಯೋತಿಷ್ಯ ಬಿ.ಎ. ಮತ್ತು ಎಂ. ಎ. ಕೋರ್ಸ್‌ನ್ನು ಅನುದಾನಿತವಾಗಿ ಪರಿಗಣಿಸುವ ಬಗ್ಗೆ.** |
| ಟಿಪ್ಪಣಿ | ಸಾರ್ವಜನಿಕ ಶಿಕ್ಷಣ ಇಲಾಖೆಯ ಆದೇಶ ಸಂಖ್ಯೆ: ಸಂಸ್ಕೃತ1:ಮಾವಿ:4:97–98 ದಿನಾಂಕ:31.08.1999 ರಂತೆ ಶ್ರೀ ಮಾತಾ ಸಂಸ್ಕೃತ ಕಾಲೇಜು, ಉಮ್ಮಚಗಿ, ಯಲ್ಲಾಪುರ, ಉತ್ತರ ಕನ್ನಡ ಜಿಲ್ಲೆ – ಈ ಕಾಲೇಜಿಗೆ 1999–2000ನೇ ಸಾಲಿನಿಂದ ಅಲಂಕಾರ ಮತ್ತು ವ್ಯಾಕರಣ ಶಾಸ್ತ್ರಗಳೊಂದಿಗೆ ಅನುದಾನಸಹಿತವಾಗಿ ಶಾಶ್ವತ ಮಾನ್ಯತೆ ನೀಡಿರುತ್ತದೆ. ವಿಶ್ವವಿದ್ಯಾಲಯದ ಆದೇಶ ಸಂಖ್ಯೆ: ಕಸಂವಿ/ಆಡಳಿತ/ಕಾಲೇಜು/21(1)/2012–13 ದಿನಾಂಕ:09.04.2012 ರಲ್ಲಿ ಈ ಕಾಲೇಜಿಗೆ 2012–13ನೇ ಸಾಲಿನಿಂದ ಜ್ಯೋತಿಷ್ಯ ಪದವಿಯನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ. |

| | |
|---|---|
| | ಸರ್ಕಾರದ ಪತ್ರ ಸಂಖ್ಯೆ:ಇಡಿ291ಯುಆರ್‌ಸಿ 2012 ದಿನಾಂಕ:15.12.2012 ರಂದು ಸಹಾಯಕ ಪ್ರಾಧ್ಯಾಪಕರು (ತರ್ಕ/ಜ್ಯೋತಿಷ್ಯ) 01 ಹುದ್ದೆ ಮಂಜೂರಾಗಿರುತ್ತದೆ. ಕಸಂವಿಯ ಪತ್ರ ಸಂಖ್ಯೆ:ಕಸಂವಿ/ಹುಭಾ/101/2012-13 ದಿನಾಂಕ:27.12.2012 ರಂತೆ ಸಹಾಯಕ ಪ್ರಾಧ್ಯಾಪಕ (ಜ್ಯೋತಿಷ್ಯ) 01 ಹುದ್ದೆಯನ್ನು ತುಂಬಿಕೊಳ್ಳಲು ಅನುಮತಿ ನೀಡಲಾಗಿರುತ್ತದೆ ಹಾಗೂ ನೇಮಕಾತಿಯನ್ನು ಅನುಮೋದಿಸಲಾಗಿರುತ್ತದೆ. ಈ ಕಾಲೇಜಿನಲ್ಲಿ ಜ್ಯೋತಿಷ್ಯ ಬಿ. ಎ. ಮತ್ತು ಎಂ. ಎ. ಕೋರ್ಸ್‌ಗಳು ನಡೆಯುತ್ತಿದ್ದು ಅನುದಾನರಹಿತವಾಗಿ ಮಾನ್ಯತೆಯನ್ನು ನೀಡಿ ನವೀಕರಿಸಲಾಗುತ್ತಿದೆ. ಸದರಿ ಕಾಲೇಜಿನವರು ದಿನಾಂಕ:30.06.2025 ರಂದು ಪತ್ರ ನೀಡಿ, ಜ್ಯೋತಿಷ್ಯ ಸಹಾಯಕ ಪ್ರಾಧ್ಯಾಪಕರ ಹುದ್ದೆಯು ಅನುದಾನ ಸಹಿತವಾಗಿ ಮಂಜೂರಾಗಿ ಅನುಮೋದನೆಯಾಗಿರುವುದರಿಂದ ಜ್ಯೋತಿಷ್ಯ ಬಿ. ಎ. ಮತ್ತು ಎಂ. ಎ. ಕೋರ್ಸ್‌ನ್ನು ಅನುದಾನಿತವಾಗಿ ಪರಿಗಣಿಸುವಂತೆ ಕೋರಿರುತ್ತಾರೆ. ಈ ವಿಷಯವನ್ನು ಪ್ರಶಾಸನ ಸಮಿತಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಕೂಲಂಕಷವಾಗಿ ಚರ್ಚಿಸಿತು. ಸರ್ಕಾರದ ಆದೇಶದ ರೀತ್ಯ ಈಗಾಗಲೇ ಜ್ಯೋತಿಷ್ಯ ವಿಷಯಕ್ಕೆ ಅನುದಾನಿತವಾಗಿ ಹುದ್ದೆಯನ್ನು ಮಂಜೂರು ಮಾಡಿದ್ದು, ಮಾನ್ಯತೆಯನ್ನು ಮಾತ್ರ ಅನುದಾನರಹಿತವಾಗಿ ನೀಡುತ್ತಿರುವುದನ್ನು ಗಮನಿಸಿತು. ಈ ಪರಿಪಾಠವನ್ನು ಕೈಬಿಟ್ಟು ಈಗಾಗಲೇ ಅನುದಾನಿತವಾಗಿ ಹುದ್ದೆಯು ಮಂಜೂರಾಗಿರುವುದರಿಂದ ಜ್ಯೋತಿಷ್ಯ ಬಿ ಎ ಮತ್ತು ಎಂ ಎ ಕೋರ್ಸ್‌ಗಳಿಗೆ ಅನುದಾನಿತವಾಗಿ ಮಾನ್ಯತೆಯನ್ನು ನೀಡುವಂತೆ/ನವೀಕರಿಸುವಂತೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.** |
| **ವಿಷಯ 11** | **ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಲ್ಲಿ ಹಣವನ್ನು ಬಳಕೆ ಮಾಡುವ ಬಗ್ಗೆ** |
| ಟಿಪ್ಪಣಿ | ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಲ್ಲಿ 2025-26ನೇ ಸಾಲಿನ ಕ್ರಿಯಾ ಯೋಜನೆಯ ಜೊತೆಗೆ 2024-25ನೇ ಸಾಲಿನ ಕ್ರಿಯಾಯೋಜನೆಯನ್ನು ಬಳಸಿಕೊಂಡು ಈ ಕೆಳಕಂಡ ಕಾರ್ಯಕ್ರಮಗಳಿಗೆ ಹಣವನ್ನು ಬಳಕೆ ಮಾಡಲು ಸಭೆಯ ಅನುಮೋದನೆಗೆ ಮಂಡಿಸಿದೆ. |

| ಕ್ರ.ಸಂ | ಕಾರ್ಯಕ್ರಮದ ವಿವರ | ಅಂದಾಜು ಮೊತ್ತ |
|---|---|---|
| 1. | ಸಂಸ್ಕೃತ ಡಾಕ್ಯುಮೆಂಟರಿ ಮಾಡಿಸುವುದು. | 14,00.000/- |
| 2. | ಕಸಂವಿಯ ಎಸ್.ಸಿ/ಎಸ್.ಟಿ ಬೋಧಕರಿಗೆ ಶೈಕ್ಷಣಿಕ ಕಾರ್ಯಗಳಲ್ಲಿ ಭಾಗವಹಿಸುವ ವೆಚ್ಚ. | 5,00,000/- |
| 3. | ಎಸ್.ಸಿ/ಎಸ್.ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ಸ್ಟೈಪಂಡ್ ನೀಡುವುದು. | 5,00,000/- |
| 4. | ವಿಚಾರ ಸಂಕಿರಣಗಳನ್ನು ನಡೆಸುವುದು. | 5,00,000/- |
| 5. | ಪುಸ್ತಕಗಳ ಮುದ್ರಣ ಕಾರ್ಯ. | 10,00,000/- |
| 6. | ವಿಶ್ವವಿದ್ಯಾಲಯದ ಎಸ್.ಸಿ/ಎಸ್.ಟಿ ಹಾಸ್ಟೆಲ್‌ಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. | 5,00,000/- |
| 7. | ಎಸ್.ಸಿ/ಎಸ್.ಟಿ ಹಾಸ್ಟೆಲ್‌ಗೆ RO ಸೌಲಭ್ಯ. | 3,00,000/- |
| | **ಒಟ್ಟು** | 47,00,000/- |

**ನಲವತ್ತೇಳು ಲಕ್ಷ ರೂಪಾಯಿಗಳು ಮಾತ್ರ.**

| | |
|---|---|
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಹಾಗೂ ಪುಸ್ತಕಗಳನ್ನು ಆದಷ್ಟು ಬೇಗನೆ ಮುದ್ರಿಸಿ ಶೈಕ್ಷಣಿಕ ತರಗತಿಗಳು ಪ್ರಾರಂಭವಾಗುವ ಮುನ್ನವೇ ವಿದ್ಯಾರ್ಥಿಗಳಿಗೆ ವಿತರಿಸಲು ಸಭೆಯು ನಿರ್ದೇಶಿಸಿತು..** |
| ವಿಷಯ 12 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ (Cadre and Recruitment) ನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಮಿತಿಯ ಅನುಮೋದನೆ ಪಡೆಯುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನವಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ನಿಯಮಕ್ಕೆ (Cadre and Recruitment) ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದೆ. ವೃಂದ ಮತ್ತು ನೇಮಕಾತಿ ನಿಯಮಕ್ಕೆ (Cadre and Recruitment) ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲು ಸಭೆಯ ಅನುಮತಿ ಕೋರಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಹಾಗೂ ಸರ್ಕಾರದ ಅನುಮೋದನೆಗೆ ಸಲ್ಲಿಸಲು ನಿರ್ಣಯಿಸಿತು.** |
| ವಿಷಯ 13 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರಿನಿಯಮವನ್ನು (Statute of the Directorate of Sanskrit Education) ಸರ್ಕಾರಕ್ಕೆ ಸಲ್ಲಿಸಲು ಸಮಿತಿಯ ಅನುಮೋದನೆ ಪಡೆಯುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನವಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ **ಪರಿನಿಯಮವನ್ನು (Statute of the Directorate of Sanskrit Education)** ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದೆ. ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ **ಪರಿನಿಯಮಕ್ಕೆ (Statute of the Directorate of Sanskrit Education)** ಸಭೆಯ ಅನುಮತಿ ಕೋರಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಹಾಗೂ ಸರ್ಕಾರದ ಅನುಮೋದನೆಗೆ ಸಲ್ಲಿಸಲು ನಿರ್ಣಯಿಸಿತು.** |
| ವಿಷಯ 14 | **ಶ್ರೀ ಬಾಲಾಜಿ ವಿದ್ಯಾಪೀಠ, ಡೀಮ್ಡ್ ಟು ಬಿ ವಿಶ್ವವಿದ್ಯಾಲಯ- ಇದರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ.** |
| ಟಿಪ್ಪಣಿ | ಪಾಂಡಿಚೇರಿಯ ಪಿಳ್ಳೆಯಾರ್ಕುಪ್ಪಂನಲ್ಲಿರುವ **ಶ್ರೀ ಬಾಲಾಜಿ ವಿದ್ಯಾಪೀಠ, ಡೀಮ್ಡ್ ಟು ಬಿ ವಿಶ್ವವಿದ್ಯಾಲಯವು** ಉತ್ತಮ ಮೂಲಭೂತ ಸೌಕರ್ಯ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿದೆ. ಇಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ, ಈ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 15 | **ಅನುಭವ ಮಂಟಪ ಸೇವಕರ ಜ್ಞಾನ ಸಂಘದ, ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಶೇಷಾದ್ರಿಪುರಂ, ಬೆಂಗಳೂರು- ಈ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪಾ ಮಹಾಕವಿ ರಸ್ತೆ, ಚಾಮರಾಜಪೇಟೆ ಬೆಂಗಳೂರು ಮತ್ತು ಅನುಭವ ಮಂಟಪ ಸೇವಕರ ಜ್ಞಾನ ಸಂಘದ, ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಶೇಷಾದ್ರಿಪುರಂ, ಬೆಂಗಳೂರು- ಈ ಸಂಸ್ಥೆಯೊಂದಿಗೆ ಯಾವುದೇ ಹಣಕಾಸಿನ ಅಪೇಕ್ಷೆ ಇಲ್ಲದೇ **(NON-FINANCIAL MEMORANDUM OF UNDERSTANDING AND COOPERATION)** ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ, ಈ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |

| | |
|---|---|
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಹಾಗೂ ವಿಶ್ವವಿದ್ಯಾಲಯವು ಪುಸ್ತಕಗಳು ಮತ್ತು ಹಸ್ತಪ್ರತಿಗಳನ್ನು ಡಿಜಿಟಲೀಕರಣಗೊಳಿಸುವ ನಿಟ್ಟಿನಲ್ಲಿ ವಹಿಸುತ್ತಿರುವ ಕಾರ್ಯವನ್ನು ಶ್ಲಾಘಿಸಿತು.** |
| ವಿಷಯ 16 | **ನಕ್ಷತ್ರ ಸೈನ್ಸಸ್ ಪ್ರೈವೇಟ್ ಲಿಮಿಟೆಡ್– ಈ ಸಂಸ್ಥೆಯೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವ ಬಗ್ಗೆ.** |
| ಟಿಪ್ಪಣಿ | ನಕ್ಷತ್ರ ಸೈನ್ಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಗಳ ಕಾಯ್ದೆ **2013** ರ ಅಡಿಯಲ್ಲಿ ಸಂಯೋಜಿಸಲ್ಪಟ್ಟ ಒಂದು ಘಟಕ, ಅನನ್ಯ ಕಾರ್ಪೊರೇಟ್ ಗುರುತಿನ ಸಂಖ್ಯೆ **U85499KA2023PTC172130** ನೊಂದಿಗೆ, ಸಂಖ್ಯೆ **27, 1** ನೇ ಕ್ರಾಸ್, ಗೋಪಾಲಪ್ಪ ಲೇಔಟ್, ಹೆಬ್ಬಾಳ ಕೆಂಪಾಪುರ, ಬೆಂಗಳೂರು **560024** – ಈ ಸಂಸ್ಥೆಯೊಂದಿಗೆ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ, ಈ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 17 | **CMR ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವ ಬಗ್ಗೆ.** |
| ಟಿಪ್ಪಣಿ | CMR ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸಂಸ್ಕೃತ ವಿಶವವಿದ್ಯಾಲಯ– ಎರಡೂ ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಸಂಶೋಧನಾ ಅವಕಾಶಗಳನ್ನು ಒದಗಿಸುವುದು ಹಾಗೂ ಬೋಧನೆ ಮತ್ತು ಸಂಶೋಧನೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸುವುದು. ಪರಸ್ಪರ ಆಸಕ್ತಿಯ ವಿಷಯಗಳಲ್ಲಿ ಸೆಮಿನಾರ್, ಸಮ್ಮೇಳನಗಳು ಮತ್ತು ಅಕಾಡೆಮಿಕ್ ವರ್ಕ್‌ಷಾಪ್‌ಗಳನ್ನು ಸಂಯೋಜಿಸುವುದು, ಪುಸ್ತಕಗಳು, ಸೆಮಿನಾರ್ ಮತ್ತು ಪ್ರಕಟಣೆಗಳು ಇತ್ಯಾದಿಗಳನ್ನು ಪ್ರಕಟಿಸುವುದು, ಬೋಧಕ/ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ವಿನಿಮಯ ಸಂಯುಕ್ತ ಸಂಶೋಧನೆ ಮತ್ತು ಪ್ರಕಟಣಾ ಚಟುವಟಿಕೆಗಳು ಅಕಾಡೆಮಿಕ್ ಸಂಪನ್ಮೂಲ ಸಾಮಗ್ರಿಗಳ ವಿನಿಮಯ ಮತ್ತು ಇತರೆ ಯಾವುದೇ ಪರಸ್ಪರ ಆಸಕ್ತಿಯ ಯೋಜನೆಗಳು/ಚಟುವಟಿಕೆಗಳನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ. ಈ **MOU** ಭಾರತೀಯ ಜ್ಞಾನ ಪದ್ಧತಿ **(Indian Knowledge System – IKS)** ಕ್ಷೇತ್ರದಲ್ಲಿ ಸಹಕಾರವನ್ನು ಉದ್ದೇಶಿಸಿದೆ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ **NEP 2020** ನಲ್ಲಿ ಒದಗಿಸಲಾದ ನಿಯಮ ಮತ್ತು ನಿಬಂಧನೆಗಳ ಪ್ರಕಾರವೂ ಅನ್ವಯಿಸುತ್ತದೆ. ಆದ್ದರಿಂದ CMR ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು** |
| ವಿಷಯ 18 | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮತ್ತು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನ್ಯಾಯಾಲಯದ ಪ್ರಕರಣಗಳ ಬಗೆಗೆ ಪ್ಯಾನೆಲ್ ವಕೀಲರನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಹಾಗೂ ಇದರ ಅಧೀನ ಕಾಲೇಜು ಮತ್ತು ಪಾಠಶಾಲೆಗಳಿಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಇತರೆ ನ್ಯಾಯಿಕ ಮತ್ತು ಅರೆ ನ್ಯಾಯಿಕ ನ್ಯಾಯಾಲಯಗಳಲ್ಲಿ ಹಲವು ನ್ಯಾಯಾಲಯ ಪ್ರಕರಣಗಳು ದಾಖಲಾಗಿದ್ದು ಇವುಗಳಲ್ಲಿ ಇನ್ನೂ ಕೆಲವು ಪ್ರಕರಣಗಳು ಬಾಕಿ ಇರುವ ಅಂಶವನು ಸಭೆಯ ಗಮನಕ್ಕೆ ತರಲಾಗಿದೆ. ಈ ನ್ಯಾಯಾಲಯ ಪ್ರಕರಣಗಳಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಿಗೆ ಸಂಬಂಧಿಸಿದಂತೆ ಪ್ರಕರಣಗಳ ಬಗೆಗೆ ಅಗತ್ಯ ಕ್ರಮ ವಹಿಸಲು ಕುಮಾರ್ ಅಂಡ್ ಕುಮಾರ್ ಅಡ್ವೋಕೇಟ್ಸ್, ಗಾಂಧಿನಗರ, ಬೆಂಗಳೂರು ಮತ್ತು ಶ್ರೀ ಅನೂಪ್ ಜಿ ದೇಶಪಾಂಡೆ, ವಕೀಲರು, ಧಾರವಾಡ ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಮತ್ತು ಪಾಠಶಾಲೆಗಳಿಗೆ |

| | |
|---|---|
| | ಸಂಬಂಧಿಸಿದಂತೆ ಪ್ರಕರಣಗಳ ಬಗೆಗೆ ಅಗತ್ಯ ಕ್ರಮ ವಹಿಸಲು ಶ್ರೀ ಸಿದ್ರಾಮಪ್ಪ ವೈ ರೋಡಗಿ ಇವರನ್ನು ನೇಮಿಸಿಕೊಳ್ಳಲಾಗಿರುತ್ತದೆ. ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ವಕೀಲರನ್ನು ನೇಮಿಸಿಕೊಳ್ಳುವ ಬದಲು ವಿಶ್ವವಿದ್ಯಾಲಯ ಮತ್ತು ನಿರ್ದೇಶನಾಲಯಗಳಿಗೆ ಸಂಬಂಧಪಟ್ಟಂತೆ ಪ್ರಕರಣಗಳು ಒಂದೇ ಸೂರಿನಡಿ ಬರುವಂತೆ ವಕೀಲರನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಬೆಂಗಳೂರು ವ್ಯಾಪ್ತಿಗೆ ಸೇರಿದ ಪ್ರಕರಣಗಳಿಗೆ ಕುಮಾರ್ ಅಂಡ್ ಕುಮಾರ್ ಅಡ್ವೋಕೇಟ್ಸ್, ಗಾಂಧಿನಗರ, ಬೆಂಗಳೂರು ಮತ್ತು ಧಾರವಾಡ ಮತ್ತು ಗುಲ್ಬರ್ಗಾ ವ್ಯಾಪ್ತಿಗೆ ಸೇರಿದ ಪ್ರಕರಣಗಳಿಗೆ ಅನೂಪ್ ಜಿ ದೇಶಪಾಂಡೆ, ವಕೀಲರು, ಧಾರವಾಡ ಇವರನ್ನು ಅನುಮೋದಿಸಿ ಅಧಿಸೂಚಿಸಲು ಅನುಮತಿಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 19** | **ಕಸಂವಿಯ 2024-25 ನೇ ಸಾಲಿನ ಅತಿಥಿ ಉಪನ್ಯಾಸಕರ ಅವಧಿಯನ್ನು ವಿಸ್ತರಿಸಿರುವುದನ್ನು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ 2024-25ನೇ ಶೈಕ್ಷಣಿಕ ಸಾಲಿಗೆ ವ್ಯಾಕರಣ, ನ್ಯಾಯ ಮತ್ತು ವೈಶೇಷಿಕ, ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ, ವೇದಾಂತ, ಹಸ್ತಪ್ರತಿಶಾಸ್ತ್ರ ವಿಭಾಗಗಳು ಹಾಗೂ ಶಾಸ್ತ್ರ ನಿಕಾಯಕ್ಕೆ ದಿನಾಂಕ: 30.04.2025 ರ ವರೆಗೆ ಮತ್ತು ಇತಿಹಾಸ ವಿಷಯಕ್ಕೆ 04.06.2025 ರ ವರೆಗೆ ತಾತ್ಕಾಲಿಕವಾಗಿ 10 ತಿಂಗಳ ಸೀಮಿತ ಅವಧಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗಿದ್ದಿತು. ಆದರೆ 2024-25 ನೇ ಸಾಲಿನ ಶೈಕ್ಷಣಿಕ ಸಾಲು ಇನ್ನೂ ಮುಕ್ತಾಯಗೊಂಡಿರದ ಕಾರಣ, ಸದರಿ ಅತಿಥಿ ಉಪನ್ಯಾಸಕರನ್ನು 2024-25ನೇ ಶೈಕ್ಷಣಿಕ ಸಾಲಿನ 31.07.2025 ರವರೆಗೆ ಮುಂದುವರೆಸಿ ದಿನಾಂಕ: 06.05.2025 ಮತ್ತು 09.06.2025 ರಂದು ಆದೇಶ ಹೊರಡಿಸಲಾಗಿರುತ್ತದೆ. ಸದರಿ ಅತಿಥಿ ಉಪನ್ಯಾಸಕರ ಮುಂದುವರಿಕೆಗಾಗಿ ಅನುಮತಿ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನೂ ಸಹ ಸಲ್ಲಿಸಲಾಗಿದ್ದಿತು. ಸದರಿ ಪ್ರಸ್ತಾವನೆಯನ್ನು ಪುರಸ್ಕರಿಸಿ ಸರ್ಕಾರವು ಅನುಮತಿ ನೀಡಿರುತ್ತದೆ. ಈ ವಿಷಯವನ್ನು ಸಮಿತಿಯ ಘಟನೋತ್ತರ ಅನುಮೋದನೆಗೆ ಮಂಡಿಸಿದೆ |
| ನಿರ್ಣಯ | **ಸರ್ಕಾರದ ಅನುಮತಿಯನ್ನು ಗಮನಿಸಿ, ಅನುಮೋದಿಸಿತು.** |
| **ವಿಷಯ 20** | **ಕಸಂವಿಯ 2025-26 ನೇ ಸಾಲಿನ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅನುಮೋದನೆಗಾಗಿ ಮಂಡಿಸಿದೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2025-26ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ದಿನಾಂಕ: 07.05.2025 ರಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯನ್ವಯ ಸ್ವೀಕೃತಗೊಂಡ ಅರ್ಹ ಅಭ್ಯರ್ಥಿಗಳಿಗೆ ದಿನಾಂಕ: 06.06.2025, 09.06.2025 ಮತ್ತು 18.06.2025 ಗಳಂದು ಸಂದರ್ಶನವನ್ನು ನಡೆಸಲಾಗಿದ್ದು ಸಂದರ್ಶನ ಸಮಿತಿಯಿಂದ ಈ ಕೆಳಕಂಡಂತೆ ಅಭ್ಯರ್ಥಿಗಳು ಆಯ್ಕೆಗೊಂಡಿರುತ್ತಾರೆ. |

| ಕ್ರ.ಸಂ. | ನಿಕಾಯ/ವಿಭಾಗ/ವಿಷಯ | ಆಯ್ಕೆಯಾದ ಅಭ್ಯರ್ಥಿಗಳ ಹೆಸರು ಮತ್ತು ವಿದ್ಯಾರ್ಹತೆ |
|---|---|---|
| 01 | ಇತಿಹಾಸ | 1. ಡಾ. ಮಂಜಮ್ಮ ಪಿ, ಎಂ.ಎ, ಪಿಹೆಚ್. ಡಿ. |
| 02 | ಹಸ್ತಪ್ರತಿಶಾಸ್ತ್ರ | 1. ವಿದುಷಿ ಸುರೇಖಾ ಕಾಮತ್, ಎಂ. ಎ, ಎಂ.ಫಿಲ್. |
| 03 | ವೇದಾಂತ | 1. ವಿದ್ವಾನ್ ಅಜಿತ್ ನಿರಂಜನ್ ಎಸ್, ಎಂ. ಎ. |
| 04 | ವ್ಯಾಕರಣ | 1. ಡಾ. ಅರ್ಚನಾ ಕಾರಂತ, ಎಂ.ಎ, ಪಿಹೆಚ್. ಡಿ. |

| | | |
|---|---|---|
| | | 2. ಡಾ. ಕೆ ಎಸ್ ಕೃಷ್ಣ, ಎಂ.ಎ, ಪಿಹೆಚ್. ಡಿ.<br>3. ಡಾ. ನವೀನ್ ಕೆ, ಎಂ.ಎ, ಪಿಹೆಚ್. ಡಿ.<br>4. ಡಾ. ಸಾಗರ್ ಬೇರಾ, ಎಂ.ಎ. |
| 05 | ನ್ಯಾಯ ಮತ್ತು ವೈಶೇಷಿಕ | 1. ಡಾ. ವೇದೇಶ್ ನಾಗಸಂಪಿಗೆ, ಎಂ.ಎ, ಪಿಹೆಚ್. ಡಿ. |
| 06 | ಸಾಂಖ್ಯ ಮತ್ತು ಯೋಗ | 1. ವೀರೇಶ್ ಕುಮಾರ್ ಸಿ, ಎಂ. ಎಸ್‌ಸಿ. |
| 07 | ಯೋಗ ಚಿಕಿತ್ಸೆ ಮತ್ತು ಸಮಾಲೋಚನೆ | 1. ಡಾ. ಶ್ರೀಲಲಿತಾ ಅವಿನಾಶ್, ಎಂ.ಎ, ಪಿಹೆಚ್. ಡಿ.<br>2. ಡಾ. ಚೈತ್ರ ಬಿ, ಎಂ.ಡಿ. |
| 08 | ಮನೋವಿಜ್ಞಾನ | 1. ರೂಪಶ್ರೀ ಎಸ್, ಎಂ. ಎಸ್‌ಸಿ. |

| | |
|---|---|
| | ಮೇಲ್ಕಂಡಂತೆ ಆಯ್ಕೆಯಾದ ಅಭ್ಯರ್ಥಿಗಳನ್ನು 2025–26 ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರನ್ನಾಗಿ ನೇಮಕಾತಿ ಆದೇಶಗಳನ್ನು ನೀಡಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **2025–26ನೇ ಸಾಲಿಗೆ ಅಧಿಸೂಚನೆಯ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ನಡೆಸಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿರುವುದನ್ನು ಗಮನಿಸಿ ಅವರಿಗೆ 2025–26ನೇ ಶೈಕ್ಷಣಿಕ ಸಾಲಿನ 11 ತಿಂಗಳಿಗೆ ನೇಮಕಾತಿ ಆದೇಶಗಳನ್ನು ನೀಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು** |
| ವಿಷಯ 21 | **ವೃತ್ತಿ ಪ್ರಗತಿ ಯೋಜನೆಯಡಿಯಲ್ಲಿ ಪ್ರಾಧ್ಯಾಪಕ (14ನೇ ಲೆವೆಲ್)ರಿಂದ ಹಿರಿಯ ಪ್ರಾಧ್ಯಾಪಕ(15ನೇ ಲೆವೆಲ್)ಗೆ ನ್ನತಿ ಪದೋನ್ನತಿ ನೀಡಲು ಸಭೆಯ ಅನುಮೋದನೆಗೆ ಮಂಡಿಸಿದೆ.** |
| ಟಿಪ್ಪಣಿ | ಪ್ರೊ. ಶ್ರೀನಿವಾಸ ವರಖೇಡಿ, ಪ್ರಾಧ್ಯಾಪಕರು, ನ್ಯಾಯ ಮತ್ತು ವೈಶೇಷಿಕ ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜ ಪೇಟೆ, ಬೆಂಗಳೂರು. ಮತ್ತು ಕುಲಪತಿಗಳು, ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ನವದೆಹಲಿ. ಹಾಗೂ ಪ್ರೊ. ವಿ. ಗಿರೀಶ್ ಚಂದ್ರ, ಪ್ರಾಧ್ಯಾಪಕರು, ಭಾಷೆ ಮತ್ತು ಸಾಹಿತ್ಯ ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜ ಪೇಟೆ, ಬೆಂಗಳೂರು– ಈ ಇಬ್ಬರು ಪ್ರಾಧ್ಯಾಪಕ ವೃತ್ತಿಯಲ್ಲಿ ಹತ್ತು ವರ್ಷಗಳ ಸೇವೆಯನ್ನು ಪೂರೈಸಿರುವುದರಿಂದ ವೃತ್ತಿ ಪ್ರಗತಿ**(CAS)** ಯೋಜನೆಯಡಿಯಲ್ಲಿ ಪ್ರಾಧ್ಯಾಪಕ ಹುದ್ದೆಯಿಂದ (14ನೇ ಲೆವೆಲ್) ಹಿರಿಯ ಪ್ರಾಧ್ಯಾಪಕ ಹುದ್ದೆಗೆ (15 ನೇ ಲೆವೆಲ್) ಪದೋನ್ನತಿ ನೀಡಲು ನಿಯಮಾನುಸಾರ ಎಲ್ಲಾ ಪ್ರಕ್ರಿಯೆಗಳನ್ನು ವಿಶ್ವವಿದ್ಯಾಲಯದಲ್ಲಿ ನಡೆಸಲಾಗಿದೆ. ಆಯ್ಕೆ ಸಮಿತಿಯ ಶಿಫಾರಸ್ಸು ವರದಿಯನ್ವಯ ಸದರಿಯವರುಗಳಿಗೆ ಪದೋನ್ನತಿ ನೀಡಿ ಸೇವಾ ಸೌಲಭ್ಯ ಹಾಗೂ ಹಣಕಾಸು ಸಮಿತಿಯ ತೀರ್ಮಾನದಂತೆ ಆರ್ಥಿಕ ಸೌಲಭ್ಯಗಳನ್ನು ಕಲ್ಪಿಸಲು ಸಭೆಯ ಅನುಮತಿಗೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು ಹಾಗೂ ಇಂದಿನಿಂದಲೇ ಅನ್ವಯವಾಗುವಂತೆ ಆದೇಶಗಳನ್ನು ನೀಡುವಂತೆ ನಿರ್ದೇಶಿಸಿತು.** |
| ವಿಷಯ 22 | **ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಸಂಸತ್, ಮೇಲುಕೋಟೆ – ಇಲ್ಲಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ ಇಬ್ಬರು ನೌಕರರನ್ನು ಇಲ್ಲಿಗೆ ನಿಯೋಜಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ದಿನಾಂಕ:09.07.2025 ರಂದು ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಸಂಸತ್, ಮೇಲುಕೋಟೆ – ಇವರಿಗೆ ಪತ್ರವನ್ನ ಬರೆದು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿಗಳ ಕೊರತೆ ಇರುವುದರಿಂದ ಇಬ್ಬರು ನೌಕರರನ್ನು ಇಲ್ಲಿಗೆ ನಿಯೋಜಿಸುವಂತೆ ಕೋರಲಾಗಿ, ಸದರಿ ಸಂಸತ್ |

| | |
|---|---|
| | ದಿನಾಂಕ:21.07.2025 ರಂದು ಕಛೇರಿ ಆದೇಶವನ್ನು ಹೊರಡಿಸಿ ಶ್ರೀಮತಿ ಎಂ.ಎನ್. ಸರಸ್ವತಿ, ಡಿಟಿಪಿ ಸೂಪರ್ವೈಸರ್ ಮತ್ತು ವಿದುಷಿ ಡಿ ಎನ್ ಸೌಭಾಗ್ಯ, ಪ್ರಥಮ ದರ್ಜೆ ಸಹಾಯಕಿ (ಹಿರಿಯ) – ಇವರುಗಳನ್ನು ಮೂಲ ಸಂಸ್ಥೆಯಿಂದಲೇ ವೇತನ ಪಡೆಯುವ ಷರತ್ತಿನೊಂದಿಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ನಿಯೋಜಿಸಿರುತ್ತಾರೆ. ಸದರಿ ನಿಯೋಜನೆಯನ್ನು ಸಮಿತಿಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 23 | **ಭಗವದ್ ರಾಮಾನುಜ ನ್ಯಾಷನಲ್ ರೀಸರ್ಚ್ ಇನ್ಸ್ಟಿಟ್ಯೂಟ್, ಮೇಲುಕೋಟೆ – ಇಲ್ಲಿಗೆ ಸಂಶೋಧನೆ/ ಗ್ರಂಥಾಲಯ/ ಆಡಳಿತಾತ್ಮಕ ಅನುಭವವಿರುವ ಇಬ್ಬರು ನೌಕರರನ್ನು ನಿಯೋಜಿಸುವ ಕುರಿತು.** |
| ಟಿಪ್ಪಣಿ | ಭಗವದ್ ರಾಮಾನುಜ ನ್ಯಾಷನಲ್ ರೀಸರ್ಚ್ ಇನ್ಸ್ಟಿಟ್ಯೂಟ್, ಮೇಲುಕೋಟೆ ರವರು ದಿನಾಂಕ:10.07.2025 ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಪತ್ರವನ್ನು ನೀಡಿ, ಸದರಿ ಸಂಸ್ಥೆಯು 2026-27 ನೇ ಸಾಲಿನಲ್ಲಿ 50 ವರ್ಷಗಳ ಸಂಭ್ರಮಾಚರಣೆ ಮಾಡಲಿದ್ದು, ಈ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದ್ದು, ಇದಕ್ಕೆ ಸಹಾಯವಾಗುವಂತೆ ಕಾರ್ಯವನ್ನು ನಿರ್ವಹಿಸಲು ಸಂಶೋಧನೆ/ಗ್ರಂಥಾಲಯ/ಆಡಳಿತಾತ್ಮಕ ಅನುಭವವಿರುವ ಇಬ್ಬರು ನೌಕರರನ್ನು ಭಗವದ್ ರಾಮಾನುಜ ನ್ಯಾಷನಲ್ ರೀಸರ್ಚ್ ಇನ್ಸ್ಟಿಟ್ಯೂಟ್, ಮೇಲುಕೋಟೆ – ಇಲ್ಲಿಗೆ ನಿಯೋಜಿಸುವಂತೆ ಕೋರಿರುತ್ತಾರೆ. ಇವರ ಮನವಿಯನ್ನು ಪುರಸ್ಕರಿಸಿ ಯೋಜನಾ ಸಹಾಯಕ ವೃಂದದ ಒಬ್ಬರು ಮತ್ತು 'ಡಿ' ವೃಂದದ ಒಬ್ಬರು ನೌಕರರನ್ನು ನಿಯೋಜಿಸಲು ಸಮಿತಿಯ ನಿರ್ದೇಶನಕ್ಕೆ ವಿಷಯ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಬ್ಬಂದಿಗಳನ್ನು ಅಗತ್ಯ ಸಂದರ್ಭಗಳಲ್ಲಿ ಭಗವದ್ ರಾಮಾನುಜ ನ್ಯಾಷನಲ್ ರೀಸರ್ಚ್ ಇನ್ಸ್ಟಿಟ್ಯೂಟ್, ಮೇಲುಕೋಟೆ – ಇಲ್ಲಿಗೆ ನಿಯೋಜಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿ ಸಭೆಯು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಿತು.** |
| ವಿಷಯ 24 | **ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆ ಸಿದ್ಧಗಂಗಾಮಠ ಇದರ ವತಿಯಿಂದ ಅನುದಾನಿತವಾಗಿ ನಡೆಸುತ್ತಿರುವ ಶ್ರೀ ಸಿದ್ದಲಿಂಗೇಶ್ವರ ಬಿ.ಎ ಇಂಟಿಗ್ರೇಟೆಡ್ ಕನ್ನಡ ಪಂಡಿತ್ ಕಾಲೇಜನ್ನು ಮುಚ್ಚುವ ಅಥವಾ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಹಸ್ತಾಂತರಿಸುವ ಕುರಿತು.** |
| ಟಿಪ್ಪಣಿ | ಶ್ರೀ ಸಿದ್ದಗಂಗಾ ವಿದ್ಯಾ ಸಂಸ್ಥೆ, ಶ್ರೀ ಸಿದ್ದಗಂಗಾ ಮಠ, ತುಮಕೂರು – ಈ ಸಂಸ್ಥೆಯಿಂದ ನಡೆಯುತ್ತಿರುವ ಶ್ರೀ ಸಿದ್ದಲಿಂಗೇಶ್ವರ ಬಿ.ಎ ಇಂಟಿಗ್ರೇಟೆಡ್ ಕನ್ನಡ ಪಂಡಿತ ಕಾಲೇಜನ್ನು ಮುಚ್ಚುವ ಸಲುವಾಗಿ ಸಂಸ್ಥೆಯು ಪ್ರಸ್ತಾವನೆಯನ್ನು ಸಲ್ಲಿಸಿರುತ್ತದೆ. ಹಾಗೂ ಅಲ್ಲಿನ ಸಿಬ್ಬಂದಿಗಳಿಗೆ ವೇತನವನ್ನೂ ಸಹ ಪಾವತಿಸಿರುವುದಿಲ್ಲ. ಸದರಿ ಕಾಲೇಜಿನ್ನು ಮುಚ್ಚುವ/ವರ್ಗಾಯಿಸುವ ಸಂಬಂಧ ಸರ್ಕಾರಕ್ಕೂ ಸಹ ಪಸ್ತಾವನೆಯನ್ನು ರವಾನಿಸಲಾಗಿದ್ದಿತು. ಸರ್ಕಾರವು ಈ ಬಗ್ಗೆ ಪರಿಶೀಲಿಸಿ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:25.06.2025 ರಂದು ಕಾಲೇಜು ಶಿಕ್ಷಣ ಇಲಾಖೆ, ತುಮಕೂರು ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಗಳ ಜಂಟಿ ಸಭೆಯನ್ನು ಕರೆದು ಚರ್ಚಿಸಿರುತ್ತದೆ. ಚರ್ಚಿಸಿದಂತೆ ಈ ಕೆಳಕಂಡಂತೆ ತೀರ್ಮಾನಗಳನ್ನು ಕೈಗೊಳ್ಳಾಗಿರುತ್ತದೆ.<br>• ಕರ್ತವ್ಯ ನಿರ್ವಹಿಸುತ್ತಿರುವ ನೌಕರರುಗಳ ಸೇವೆ & ವೇತನ ಸಂರಕ್ಷಣೆಯ ಜವಾಬ್ದಾರಿಯು ಸಹ ಆಡಳಿತ ಮಂಡಳಿಯದೇ ಆಗಿರುವುದರಿಂದ, ಕಾಲೇಜು ಮುಚ್ಚುವ ಹಿನ್ನೆಲೆಯಲ್ಲಿ, ನೌಕರುಗಳನ್ನು ಅದೇ ಸಂಸ್ಥೆಯ ಇತರೆ ಕಾಲೇಜುಗಳಿಗೆ ನಿಯೋಜಿಸುವ ಬಗ್ಗೆ ಆಡಳಿತ ಮಂಡಳಿ ಹಂತದಲ್ಲಿಯೇ ಅಗತ್ಯ ಕ್ರಮವಹಿಸುವುದು. |

**ಅಥವಾ**

- ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ & ಬೋಧಕೇತರ ನೌಕರರುಗಳಿಗೆ ಆಡಳಿತ ಮಂಡಳಿ ಸ್ವ-ಇಚೆ ನಿವೃತ್ತಿ (Voluntary retirement Package) ನೀಡಲು ಕ್ರಮ ವಹಿಸುವುದು.

**ಅಥವಾ**

- ನೌಕರರು ಹಾಗೂ ಆಡಳಿತ ಮಂಡಳಿ ಲಿಖಿತ ರೂಪದಲ್ಲಿ ಮನವಿ ನೀಡಿದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅನುದಾನಿತ ನೌಕರರುಗಳು ನಿವೃತ್ತರಾಗುವವರೆಗೂ ಸಂಸ್ಥೆಯ ಮೂಲಕವೆ ಪ್ರಸ್ತುತ ಜಾರಿಯಲ್ಲಿರುವ ಮಾದರಿಯ ವೇತನ ಪಾವತಿಸುವ ಷರತ್ತಿಗೊಳಪಟ್ಟು, ಅವರ ಸೇವೆಯನ್ನು ಇತರ ಕಾರ್ಯಭಾರವಿರುವ ಸರ್ಕಾರಿ ಕಾಲೇಜುಗಳಲ್ಲಿ ಬಳಸಿಕೊಳ್ಳುವ ಬಗ್ಗೆ ಇಲಾಖೆಯು ನಿಯಮಾನುಸಾರ ಸೂಕ್ತ ನಿರ್ಧಾರ ಕೈಗೊಳ್ಳುವುದು.

ಈ ಮೇಲ್ಕಂಡ ನಿರ್ಣಯಗಳಂತೆ ಅಗತ್ಯ ಕ್ರಮವನ್ನು ವಹಿಸಲು ಆದೇಶಕ್ಕಾಗಿ ಪ್ರಶಾಸನ ಸಮಿತಿಯ ಮುಂದೆ ಮಂಡಿಸಿದೆ.

**ನಿರ್ಣಯ** **ಸರ್ಕಾರದ ಮಾನ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯನ್ನು ಗಮನಿಸಿತು ಹಾಗೂ ಸದರಿ ಕಾಲೇಜಿನ ನೌಕರರ ಸೇವಾಭದ್ರತೆಗಳ ರಕ್ಷಣೆಯನ್ನು ಗಮನದಲ್ಲಿರಿಸಿಕೊಂಡು ಸರ್ಕಾರದ ಸಭೆಯ ನಡವಳಿಯಂತೆ ಕ್ರಮವಹಿಸಲು ಸಂಸ್ಥೆಗೆ ಸೂಚಿಸುವಂತೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.**

**ವಿಷಯ 25** **ವಿದೇಶಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಶುಲ್ಕಗಳನ್ನು ನಿಗದಿಪಡಿಸುವ ಬಗ್ಗೆ.**

ವಿದೇಶಿ ವಿದ್ಯಾರ್ಥಿಗಳು ಅಧ್ಯಯನ ಮಾಡುವ ಬಿ.ಎ/ಬಿ.ಎಸ್ಸಿ/ಎಂ.ಎ/ಎಂ.ಎಸ್ಸಿ ಪದವಿಗಳು ಮತ್ತು ಇತರೆ ಕೋರ್ಸ್‌ಗಳ ಶುಲ್ಕಕ್ಕೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಲಾಗಿ, ಸಮಿತಿಯು 2025-26ನೇ ಸಾಲಿನಿಂದ ಈ ಕೆಳಕಂಡಂತೆ ಶುಲ್ಕವನ್ನು ನಿಗದಿಪಡಿಸಿದೆ. ನಿಗದಿಪಡಿಸಿರುವ ಶುಲ್ಕಕ್ಕೆ ಪ್ರಶಾಸನ ಸಮಿತಿಯ ಒಪ್ಪಿಗೆಯನ್ನು ಕೋರಿದೆ.

ಟಿಪ್ಪಣಿ

**KARNATAKA SANSKRIT UNIVERSITY, BANGALORE-18**

**2025-26 FEE STRUCTURE For Foreign Student`s**

| Sl.No | Details | Amount (yearly Fee) |
|---|---|---|
| | **B.A/ B.Sc/ M.A/ M.Sc Degree** | |
| 01 | B.A | 10000.00 |
| 02 | B.Sc | 25000.00 |
| 03 | M.A | 15000.00 |
| 04 | M.Sc | 30000.00 |
| | **CERTIFICATE /DIPLOMA/PG.DIPLOMA Course** | |
| | CERTIFICATE | 5000.00 |
| | DIPLIMA | 7500.00 |
| | PG.DIPLOMA | 10000.00 |
| | **Ph.D Degree** | |
| 01 | Application Fee | 1000.00 |
| 03 | Provisional Registration Fee | 5000.00 |
| 03 | Course work Fee | 5000.00 |

| | | | | |
|---|---|---|---|---|
| | 04 | Course work Examination Fee | | 3000.00 |
| | 05 | Course work Revaluation Fee | | 2000.00 |
| | 06 | Library Fee | | 1000.00 |
| | 07 | Annual Tuition Fee | | 15000.00 |
| | 08 | Thesis title Change Fee | | 5000.00 |
| | 09 | Thesis Submission & Examination Fee | | 30000.00 |
| | 10 | Convocation Fee | | 5000.00 |
| | 11 | Re-registration Fee | | 50000.00 |
| | 12 | Publication Fee | | 20000.00 |
| | 13 | Extension Fee | | 15000.00 |
| | For Both Indian citizens and foreigners. (D.Lit) | | | |
| | 01 | D.Lit | | 35000.00 |
| ನಿರ್ಣಯ | ಸಭೆಯು ಸರ್ವಾನುಮತದಿಂದ ಅನುಮೋದಿಸಿತು. | | | |
| ವಿಷಯ 26 | **ಶ್ರೇಯೋ ಫೌಂಡೇಶನ್‌ನ ಸಹಯೋಗದೊಂದಿಗೆ ಚಿತ್ರಕಲೆ ಮತ್ತು ರಂಗೋಲಿಯಲ್ಲಿ ಪ್ರಮಾಣಪತ್ರ ಕಾರ್ಯಕ್ರಮಗಳಿಗೆ ಅನುಮೋದನೆ ಪಡೆಯುವ ಬಗ್ಗೆ.** | | | |
| ಟಿಪ್ಪಣಿ | ದೃಶ್ಯ ಮತ್ತು ಸಾಂಪ್ರದಾಯಿಕ ಕಲೆಗಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಷ್ಠಿತ ಸಂಸ್ಥೆಯಾದ ಶ್ರೇಯೋ ಫೌಂಡೇಶನ್‌ನ ಸಹಯೋಗದೊಂದಿಗೆ ನೀಡಲು ಪ್ರಸ್ತಾಪಿಸಲಾದ (1) ರಂಗೋಲಿ ಮತ್ತು ಡ್ರಾಯಿಂಗ್ ಮತ್ತು (2) ಭಾವಚಿತ್ರ ಚಿತ್ರಕಲೆ ಮತ್ತು ರಂಗೋಲಿ ಎಂಬ ಎರಡು ಪ್ರಮಾಣಪತ್ರ ಕಾರ್ಯಕ್ರಮಗಳ ಪರಿಚಯವನ್ನು ಪರಿಗಣಿಸಲು ಸ್ಥಳೀಯ ಕಲಾ ಪ್ರಕಾರಗಳು, ಕೌಶಲ್ಯ ಅಭಿವೃದ್ಧಿ ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಯನ್ನು ರಚನಾತ್ಮಕ ಶೈಕ್ಷಣಿಕ ಕೊಡುಗೆಗಳ ಮೂಲಕ ಉತ್ತೇಜಿಸುವ ಗುರಿಯನ್ನು ಹೊಂದಿರುವ ವಿಶ್ವವಿದ್ಯಾಲಯದ ವಿಸ್ತರಣೆ ಮತ್ತು ಪ್ರಭಾವ ಉಪಕ್ರಮಗಳ ಭಾಗವಾಗಿ ಈ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲಾಗಿದೆ. ಪ್ರತಿಯೊಂದು ಕಾರ್ಯಕ್ರಮವು ಆರು ತಿಂಗಳ ಅವಧಿಯದ್ದಾಗಿದ್ದು, ವಾರಕ್ಕೆ ಒಂದು ಅಥವಾ ಎರಡು ಬಾರಿ ತರಗತಿಗಳನ್ನು ನಡೆಸಲಾಗುತ್ತದೆ ಮತ್ತು 16 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಭಾಗವಹಿಸುವವರಿಗೆ ಮುಕ್ತವಾಗಿದೆ. ಪಠ್ಯಕ್ರಮವು ಚಿತ್ರಕಲೆ, ಚಿತ್ರಕಲೆ ಮತ್ತು ರಂಗೋಲಿ ತಂತ್ರಗಳ ಮೂಲ ಹಂತದಿಂದ ಮುಂದುವರಿದ ಹಂತಗಳವರೆಗೆ ವ್ಯಾಪಿಸಿದೆ, ಪ್ರಾಯೋಗಿಕ ಅನ್ವಯಿಕೆ, ಕಲಾತ್ಮಕ ಅಭಿವ್ಯಕ್ತಿ ಮತ್ತು ಪೋರ್ಟ್‌ಫೋಲಿಯೊ ಅಭಿವೃದ್ಧಿಯ ಮೇಲೆ ಬಲವಾದ ಗಮನವನ್ನು ಹೊಂದಿದೆ. ಬಣ್ಣ ಸಿದ್ಧಾಂತ, ಸ್ಟಿಲ್-ಲೈಫ್ ಮತ್ತು ಲ್ಯಾಂಡ್‌ಸ್ಕೇಪ್ ಸ್ಕೆಚಿಂಗ್, ಫಿಗರ್ ಮತ್ತು ಪೋರ್ಟ್ರೇಟ್ ಡ್ರಾಯಿಂಗ್, ವಿಷಯಾಧಾರಿತ ಪರಿಶೋಧನೆ ಮತ್ತು ಸಾಂಪ್ರದಾಯಿಕ ಮತ್ತು ನೈಸರ್ಗಿಕ ವಸ್ತುಗಳನ್ನು (ಧಾನ್ಯಗಳು, ಎಲೆಗಳು, ಹೂವುಗಳು ಮತ್ತು ಬಣ್ಣದ ಪುಡಿಗಳು) ಬಳಸಿಕೊಂಡು ಸಾಂಪ್ರದಾಯಿಕ ರಂಗೋಲಿ ಶೈಲಿಗಳಲ್ಲಿ ತರಬೇತಿಯನ್ನು ಘಟಕಗಳು ಒಳಗೊಂಡಿವೆ. ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳನ್ನು ನಿರ್ಣಯಿಸಲು ಮತ್ತು ಕಲೆಗಳ ಸಮುದಾಯದ ಮೆಚ್ಚುಗೆಯನ್ನು ಉತ್ತೇಜಿಸಲು ಕಾರ್ಯಕ್ರಮಗಳು ಅಂತಿಮ ಪ್ರದರ್ಶನ ಮತ್ತು ಮೌಲ್ಯಮಾಪನದಲ್ಲಿ ಮುಕ್ತಾಯಗೊಳ್ಳುತ್ತವೆ. ಶ್ರೇಯೋ ಫೌಂಡೇಶನ್‌ನೊಂದಿಗಿನ ಸಹಯೋಗವು ಅನುಭವಿ ವೈದ್ಯರು ಮತ್ತು ಮಾರ್ಗದರ್ಶಕರನ್ನು ತರಗತಿಗಳನ್ನು ನಡೆಸಲು ಕರೆತರುತ್ತದೆ, ಶೈಕ್ಷಣಿಕ ಮೇಲ್ವಿಚಾರಣೆ ಮತ್ತು ಪ್ರಮಾಣೀಕರಣವನ್ನು ವಿಶ್ವವಿದ್ಯಾಲಯವು ನಿರ್ವಹಿಸುತ್ತದೆ. | | | |

| | |
|---|---|
| | ಅಂತೆಯೇ, ವಿಶ್ವವಿದ್ಯಾನಿಲಯದಿಂದ ಅಗತ್ಯ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸೌಲಭ್ಯದೊಂದಿಗೆ ಈ ಪ್ರಮಾಣಪತ್ರ ಕಾರ್ಯಕ್ರಮಗಳ ಔಪಚಾರಿಕ ಆರಂಭಕ್ಕಾಗಿ ಸಮಿತಿಯ ಅನುಮೋದನೆಯನ್ನು ಕೋರಲಾಗಿದೆ. |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 27** | **ಹಸ್ತಪ್ರತಿ ವಸ್ತು ಸಂಗ್ರಹಾಲಯ (Manuscript Museum) ಉದ್ಘಾಟನೆ ಮಾಡಲು ಅನುಮತಿ ಕೋರಿ.** |
| ಟಿಪ್ಪಣಿ | ಚಾಮರಾಜ ಪೇಟೆಯ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಟ್ಟಡದ ಮೇಲ್ಭಾಗದಲ್ಲಿ ನಿರ್ಮಿಸಿರುವ ಹಸ್ತಪ್ರತಿ ಮ್ಯೂಸಿಯಂ ಉದ್ಘಾಟನೆಗೆ ಸಿದ್ಧವಾಗಿದೆ. ಈ ಮ್ಯೂಸಿಯಂ ಸಂಸ್ಕೃತ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಭಾರತೀಯ ಜ್ಞಾನ ಪದ್ಧತಿಯ ಅಮೂಲ್ಯ ಹಸ್ತಪ್ರತಿಗಳ ಸಂಗ್ರಹ ಮತ್ತು ಸಂರಕ್ಷಣೆಗೆ ಮೀಸಲಾಗಿದ್ದು, ಅಧ್ಯಯನ ಹಾಗೂ ಸಂಶೋಧನೆಗೆ ತುಂಬಾ ಪ್ರಯೋಜನಕಾರಿಯಾಗಿದೆ. ಈ ಮಹತ್ವಪೂರ್ಣ ಯೋಜನೆಗೆ ವಿಶ್ವವಿದ್ಯಾಲಯವು ಬೇಕಾದ ಎಲ್ಲಾ ಸಿದ್ಧತೆಯನ್ನು ಪೂರ್ಣಗೊಳಿಸಿದ್ದು, ಶೀಘ್ರದಲ್ಲೇ ಈ ಮ್ಯೂಸಿಯಂ ಉದ್ಘಾಟನೆಗೊಳ್ಳಲಿದ್ದು ಈ ವಿಷಯವನ್ನು ಸಭೆಯ ಅನುಮತಿಗೆ ಮಂಡಿಸಿದೆ. |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮತಿಸಿತು.** |
| **ವಿಷಯ 28** | **12 ಮತ್ತು 13 ನೇ ದೀಕ್ಷಾಂತ ಘಟಿಕೋತ್ಸವವನ್ನು ಹಮ್ಮಿಕೊಳ್ಳುವ ಬಗ್ಗೆ** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2023-24 ಮತ್ತು 2024-25ನೇ ಸಾಲಿನ 12 ಮತ್ತು 13ನೇ ದೀಕ್ಷಾಂತ ಘಟಿಕೋತ್ಸವವನ್ನು 2026ನೇ ವರ್ಷದ ಫೆಬ್ರವರಿ ಮಾಹೆಯಲ್ಲಿ ನಡೆಸಲು ಉದ್ದೇಶಿಸಿದ್ದು, ದೀಕ್ಷಾಂತ ಘಟಿಕೋತ್ಸವಕ್ಕೆ ಸಂಬಂಧಿಸಿದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿದ್ದು, ಈ ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಿದೆ. |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮತಿಸಿತು.** |
| **ವಿಷಯ 29** | **CAS Notification ಹೊರಡಿಸುವ ಕುರಿತು.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ UGC ವೇತನ ಶ್ರೇಣಿಯ ಬೋಧಕ ಹುದ್ದೆಗಳಾದ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು ಹಾಗೂ UGC ವೇತನ ಶ್ರೇಣಿಯ ಬೋಧಕೇತರ ಹುದ್ದೆಯಾದ ಗ್ರಂಥಾಲಯ ಸಹಾಯಕರು- ಇವರಲ್ಲಿ ಅರ್ಹತೆಯುಳ್ಳವರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವ ಉದ್ದೇಶದಿಂದ ವರ್ಷಕ್ಕೆ 02 ಬಾರಿ CAS Notification ಅನ್ನು ಹೊರಡಿಸಲು ಹಾಗೂ ಮುಂದುವರೆದು ನಿಯಮಾನುಸಾರ ಪ್ರಕ್ರಿಯೆಗಳನ್ನು ಕೈಗೊಳ್ಳಲು ಸಭೆಯ ಅನುಮೋದನೆಗೆ ವಿಷಯವನ್ನು ಮಂಡಿಸಿದೆ. |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮತಿಸಿತು.** |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರೆ ವಿಷಯಗಳು** |
| **ವಿಷಯ 01** | **ದಾಖಲಾತಿ ಮತ್ತು ಪರೀಕ್ಷಾ ಶುಲ್ಕವನ್ನು ವಿದ್ಯಾರ್ಥಿಗಳು ಪಾವತಿಸುವ ಬಗ್ಗೆ.** |
| ಟಿಪ್ಪಣಿ | ವಿಶ್ವವಿದ್ಯಾಲಯ ಹಾಗೂ ಅಧೀನ ಕಾಲೇಜುಗಳ ವಿವಿಧ ಕೋರ್ಸುಗಳಿಗೆ ಶುಲ್ಕಗಳನ್ನು ನಿಗಧಿಪಡಿಸಲಾಗಿದ್ದು, ದಾಖಲಾತಿ ಶುಲ್ಕ ಮತ್ತು ಪರೀಕ್ಷಾ ಶುಲ್ಕವನ್ನು ಪಾವತಿಸುವ ಸಂದರ್ಭದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ಶೇ 50ರಷ್ಟನ್ನು ರಿಯಾಯಿತಿ ನೀಡಲಾಗುತ್ತಿದ್ದು, ಈ ರಿಯಾಯಿತಿಯು ಆಡಿಟ್‌ನಲ್ಲಿ ಆಕ್ಷೇಪಣೆಗೊಂಡಿರುತ್ತದೆ. ಈ ರಿಯಾಯಿತಿ ಮೊತ್ತವನ್ನು ಮರು ಭರಣ ಮಾಡಿಕೊಡುವಂತೆ ಸಮಾಜ ಕಲ್ಯಾಣ ಇಲಾಖೆಯನ್ನು ಕೋರಲಾಗಿ, ಸದರಿ ಇಲಾಖೆಯು ಮರುಭರಣಕ್ಕೆ ಅವಕಾಶವಿರುವುದಿಲ್ಲ. ಬದಲಿಗೆ ಅಂತಹ ಅರ್ಹ ವಿದ್ಯಾರ್ಥಿಗಳಿಗೆ **DBT** ಮೂಲಕ ವಿದ್ಯಾರ್ಥಿ ವೇತನವನ್ನು ನೀಡಲು ಅಷ್ಟೆ ಅವಕಾಶವಿರುತ್ತದೆ ಎಂದು ತಿಳಿಸಿರುತ್ತಾರೆ. |

| | |
|---|---|
| | ಹಾಗಾಗಿ 2025–26ನೇ ಸಾಲಿನ ದಾಖಲಾತಿ ಮತ್ತು ಪರೀಕ್ಷಾ ಶುಲ್ಕಗಳಿಗೆ ಸಂಬಂಧಿಸಿದಂತೆ ಪೂರ್ಣ ಪ್ರಮಾಣದಲ್ಲಿ ನಿಗಧಿತ ಶುಲ್ಕವನ್ನು ಪಾವತಿಸಿ ನಿಯಮಾನುಸಾರ ಕರ್ನಾಟಕ ಸರ್ಕಾರದ **SSP** ಮೂಲಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ರ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನವನ್ನು ಪಡೆಯಲು ಅವಕಾಶವಿದ್ದು, ಈ ವಿಷಯವನ್ನು ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಈ ವಿಷಯದ ಮೇಲೆ ಸಭೆಯು ಕೂಲಂಕಷವಾಗಿ ಚರ್ಚಿಸಿತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ರ ವಿದ್ಯಾರ್ಥಿಗಳಿಗೆ ಸರ್ಕಾರದಿಂದ SSP ಮೂಲಕ ವಿದ್ಯಾರ್ಥಿವೇತನವನ್ನು ಪಡೆಯಲು ಅವಕಾಶವಿದ್ದು, ಅಂತಹ ಅರ್ಹ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದಿಂದಲೂ ಶೇ.50 ರಷ್ಟನ್ನು ರಿಯಾಯಿತಿ ನೀಡಿದಲ್ಲಿ ಸೌಲಭ್ಯವು ಮರುಕಳಿಸಿದಂತಾಗುತ್ತದೆ. ಹಾಗಾಗಿ 2025–26ನೇ ಸಾಲಿನಿಂದಲೇ ಜಾರಿಗೆ ಬರುವಂತೆ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳಿಂದ ನಿಗಧಿಪಡಿಸಲಾದ ಶುಲ್ಕವನ್ನು ವಿದ್ಯಾರ್ಥಿಗಳು ಪೂರ್ಣಪ್ರಮಾಣದಲ್ಲಿ ಪಾವತಿಸಿ ನಂತರ ಸರ್ಕಾರದಿಂದ SSP ಮೂಲಕ ವಿದ್ಯಾರ್ಥಿವೇತನವನ್ನು ಪಡೆಯಲು ಸೂಚಿಸಬಹುದಾಗಿದೆ ಎಂದು ಸಭೆಯು ಸರ್ವಾನುಮತದಿಂದ ನಿರ್ಣಯಿಸಲಾಯಿತು.** |

**ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.**

**ಪ್ರೊ. ಸಿ. ಪಾಲಯ್ಯ**
ಕುಲಸಚಿವರು(ಪ್ರ)
**ಸದಸ್ಯ ಕಾರ್ಯದರ್ಶಿಗಳು**

**ಡಾ. ಅಹಲ್ಯಾ ಎಸ್.**
ಕುಲಪತಿಗಳು
**ಅಧ್ಯಕ್ಷರು**